# ಹೆಲಿಕಾಪ್ಟರ್ ಶಾಟ್ಸ್ ಇನ್ನೂ ಬಾಕಿ ಇದೆ!



**ಮಹೇಂದ್ರಸಿಂಗ್ ದೋನಿ ಅವರ ಬ್ಯಾಟಿಂಗ್ ಶೈಲಿಗೆ ಬೇರೆಯವರ ಶೈಲಿಯನ್ನು ಹೋಲಿಸಲು ಸಾಧ್ಯವೇ ಇಲ್ಲ.**

★ **ಗಿರೀಶ ದೊಡ್ಡಮನಿ**

ಬರೋಬ್ಬರಿ ಹದಿನಾಲ್ಕು ವರ್ಷಗಳ ಹಿಂದಿನ ಮಾತು. ಡೆಹ್ರಾಡೂನ್ ಮೈದಾನದಲ್ಲಿ ಉದ್ದಕೂದಲಿನ ಹುಡುಗನ ಸ್ಫೋಟಕ ಬ್ಯಾಟಿಂಗ್ ನೋಡಲು ಜನ ಮುಗಿಬಿದ್ದಿದ್ದರು. ಸಿಸಿಎಲ್ ತಂಡದ ಆ ಬ್ಯಾಟ್ಸ್‌ಮನ್ ಸಿಡಿಸಿದ ಮೂರು ಸಿಕ್ಸರ್‌ಗಳಿಗೆ ಮೂರು ಚೆಂಡುಗಳು ಮೈದಾನದ ಹೊರಗೆ ಬಿದ್ದಿದ್ದವು. ನಂತರ ಹುಡುಕಿದರೂ ಸಿಕ್ಕಿರಲಿಲ್ಲ. ಅದಕ್ಕೆ ಆಯೋಜಕರು ಇನ್ನೂ ಇರುವ ಒಂದೆರಡು ಚೆಂಡು ಕಳೆಯುವ ಮುನ್ನ ಮಾರುಕಟ್ಟೆಯಿಂದ ಒಂದಷ್ಟು ಚೆಂಡುಗಳನ್ನು ಖರೀದಿಸಿ ತರಲು ದೌಡಾಯಿಸಿದ್ದರು. ಅಲ್ಲಿದ್ದ ಕ್ರಿಕೆಟ್ ಅಭಿಮಾನಿಗಳಿಗೆ ಹೆಲಿಕಾಪ್ಟರ್ ಶಾಟ್‌ಗಳ ಪರಿಚಯ ಆಗಿತ್ತು.

ಅದಾಗಿ ಮೂರು ವರ್ಷ ಕಳೆದ ಮೇಲೆ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದ ಆ ಹುಡುಗ ಮಹೇಂದ್ರಸಿಂಗ್ ದೋನಿ. ನಂತರದ ದಿನಗಳಲ್ಲಿ ಇಡೀ ಜಗತ್ತಿಗೆ ತಮ್ಮ ವಿಶಿಷ್ಟವಾದ ಹೆಲಿಕಾಪ್ಟರ್ ಶಾಟ್‌ನ ಪರಿಚಯ ಮಾಡಿಕೊಟ್ಟರು. ಆದರೆ, ಇಲ್ಲಿಯವರೆಗೂ ಅವರನ್ನು ಬಿಟ್ಟರೆ ಪರಿಣಾಮಕಾರಿ ಆ ಹೊಡೆತವನ್ನು ಆಡಬಲ್ಲ ಇನ್ನೊಬ್ಬ ಆಟಗಾರ ಸಿದ್ಧನಾಗಿಲ್ಲ ಆ ಮಾತು ಬೇರೆ. ಬ್ಯಾಟ್ಸ್‌ಮನ್ ಪ್ಯಾಡ್ ಮತ್ತು ಬ್ಯಾಟ್ ನಡುವಣ ಶರವೇಗದಲ್ಲಿ ನುಗ್ಗಿ ಬರುವ ಯಾರ್ಕರ್‌ಗಳನ್ನು ಬೌಂಡರಿಗೆರೆ ದಾಟಿಸಲು ಹೆಲಿಕಾಪ್ಟರ್ ಹೊಡೆತ ಅತ್ಯಂತ ಪರಿಣಾಮಕಾರಿ. ಆದರೆ, ಚೆಂಡಿನ ವೇಗಕ್ಕಿಂತಲೂ ಹೆಚ್ಚು ಚುರುಕು ಮತ್ತು ನಿಖರವಾದ ಬ್ಯಾಟ್ ಪ್ರಯೋಗ ಮಾಡಬೇಕು. ಕೊಂಚ ಎಡವಟ್ಟಾದರೂ ಚೆಂಡು ಸ್ಟಂಪ್‌ಗಳನ್ನು ಎಗರಿಸುವುದು ಖಚಿತ. ಆದರೆ ಬಹಳಷ್ಟು ಸಂದರ್ಭದಲ್ಲಿ ದೋನಿಯ ನಿಖರತೆ ತಪ್ಪಿಲ್ಲ. ಅವರ ಹೆಸರಿನಲ್ಲಿ ನಾಯಕತ್ವ, ವಿಕೆಟ್‌ಕೀಪಿಂಗ್, ಬ್ಯಾಟಿಂಗ್ ದಾಖಲೆಗಳು ಹತ್ತಾರಿದ್ದರೂ ಹೆಲಿಕಾಪ್ಟರ್ ಶಾಟ್‌ನಿಂದಲೇ ಅವರು ಹೆಚ್ಚು ಗುರುತಿಸಿಕೊಳ್ಳುತ್ತಾರೆ. ಅದ್ದರಿಂದಾಗಿಯೇ ವಿಶ್ವದ ಸರ್ವಶ್ರೇಷ್ಠ ವೇಗದ ಬೌಲರ್‌ಗಳೂ ಮಹಿಗೆ ಯಾರ್ಕರ್ ಎಸೆತಗಳನ್ನು ಹಾಕುವ ಧೈರ್ಯ ಮಾಡುತ್ತಿಲ್ಲ.

ಜಾರ್ಖಂಡ್ ರಾಜಧಾನಿ ರಾಂಚಿಯ ಮೆಕಾನ್ ಕ್ರೀಡಾಂಗಣಕ್ಕೆ ಕಾಲಿಟ್ಟ ದಿನದಿಂದಲೂ ಕ್ರಿಕೆಟ್ ಕಾಪಿಪುಸ್ತಕದ ಹೊಡೆತಗಳು ಮತ್ತು ಆಟದ ಶೈಲಿಗಳನ್ನು ಅನುಕರಿಸದೇ ತಮ್ಮದೇ ಛಾಪು ಒತ್ತುತ್ತ ಬೆಳೆದವರು ಮಹಿ. ಅವರ ಪ್ರತಿಯೊಂದು ಹೊಡೆತ ಮತ್ತು ಪಾದಚಲನೆಯ ಶೈಲಿಯನ್ನು ಗಮನಿಸಿದರೆ ಸಾಂಪ್ರದಾಯಿಕ ಅನುಕರಣೆ ಕಾಣುವುದು ಕಡಿಮೆ. ಇಂತಹ ನೈಜ ಮತ್ತು ಸ್ವಂತಿಕೆಯ ಆಟದಿಂದ ಗುರುತಿಸಿಕೊಂಡಿರುವ ಕೆಲವೇ ಕೆಲವು ಶ್ರೇಷ್ಠ ಬ್ಯಾಟ್ಸ್‌ಮನ್‌ಗಳಲ್ಲಿ ಮಹಿ ಕೂಡ ಒಬ್ಬರು.

ದಕ್ಷಿಣ ಆಫ್ರಿಕಾದ ಸ್ಕೂಪ್ ಪರಿಣತ ಎ.ಬಿ. ಡಿವಿಲಿಯರ್ಸ್, ಅಪ್ಪರ್ ಕಟ್ ಮೂಲಕ ಸ್ಲಿಪ್ ಫೀಲ್ಡರ್‌ಗಳ